**ಓ.ಎಸ್. ನಂಃ 350/2014**

**ಡಿ.ಡಬ್ಲ್ಯೂಃ 1**

**ದಿನಾಂಕ 04.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಸ್.ಎನ್. ವಕೀಲರಿಂದಃ**

1. ಪ್ರತಿವಾದಿ ಪತ್ರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನಾನು ವೃತ್ತಿಯಲ್ಲಿ ವ್ಯವಸಾಯಗಾರನಾಗಿರುತ್ತೇನೆ. ನಾನು 10 ನೇ ತರಗತಿಯವರಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ಕುಟುಂಬದಲ್ಲಿ ನಾನೊಬ್ಬನೇ ವಿದ್ಯಾವಂತನಾಗಿರುತ್ತೇನೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಮೃತಪಟ್ಟರೆ ಪೌತಿ ಖಾತೆಯು ಅವನ ಎಲ್ಲಾ ವಾರಸುದಾರರ ಹೆಸರಿಗೆ ಆಗಬೇಕು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ನನ್ನ ಕುಟುಂಬದಲ್ಲಿ ನಾನೊಬ್ಬನೇ ವಿದ್ಯಾವಂತನಾಗಿರುವ ಕಾರಣ ದಾವಾ ಆಸ್ತಿಯನ್ನು ಮೋಸದಿಂದ ನನ್ನ ಒಬ್ಬನ ಹೆಸರಿಗೆ ಮಾತ್ರ ಪೌತಿ ಖಾತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ವಾದಿಯರ ತಂದೆಯಾದ ಪಾಪೇಗೌಡ @ ಸಿ.ಎಸ್.ಬೋರೇಗೌಡ ಮತ್ತು ನನ್ನ ತಾತನಾದ ಕರೀಗೌಡ ಇವರಿಬ್ಬರು ಖಾಸಾ ಅಣ್ಣ–ತಮ್ಮಂದಿರಾಗಿದ್ದು, ಅವರಿಬ್ಬರು ಸಹ ಸಿದ್ದೇಗೌಡರ ಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯರ ತಂದೆಯಾದ ಪಾಪೇಗೌಡ @ ಸಿ.ಎಸ್.ಬೋರೇಗೌಡ ಸಿದ್ದೇಗೌಡರ ಮೊದಲನೇ ಹೆಂಡತಿಯಿಂದ ಜನಿಸಿದ ಮಗನಾಗಿದ್ದು, ನನ್ನ ತಾತನಾದ ಕರೀಗೌಡರು ಸಿದ್ದೇಗೌಡರ ಎರಡನೇಯ ಹೆಂಡತಿಯಿಂದ ಜನಿಸಿದ ಮಗನಾಗಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

3. ವಾದಿಯರ ತಂದೆಯಾದ ಪಾಪೇಗೌಡ @ ಸಿ.ಎಸ್.ಬೋರೇಗೌಡ ಮತ್ತು ನನ್ನ ತಾತನಾದ ಕರೀಗೌಡ ಇವರಿಬ್ಬರು ಪಾಲು ವಿಭಜನೆ ಮಾಡಿಕೊಂಡ ನಂತರದಲ್ಲಿ ದಿನಾಂಕ 28.03.1947 ರಂದು ದಾವಾ ಆಸ್ತಿಯನ್ನು ವಾದಿಯರ ತಂದೆಯಾದ ಪಾಪೇಗೌಡ @ ಸಿ.ಎಸ್.ಬೋರೇಗೌಡರು ನನ್ನ ತಾತನಾದ ಕರೀಗೌಡರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿಃ ಪೂರ್ವಕ್ಕೆ-ಚಾಮರಾಜ ನಾಲೆ, ಪಶ್ಚಿಮಕ್ಕೆ - ಗಂಧನಹಳ್ಳಿ ರಾಮೇಗೌಡರ ಜಮೀನು, ಉತ್ತರಕ್ಕೆ

ಮತ್ತು ದಕ್ಷಿಣಕ್ಕೆ-4 ನೇ ವಾದಿಯ ಹೆಸರಿನಲ್ಲಿರುವ ಜಮೀನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗ ಸದರಿ ಜಮೀನನ್ನು 4 ನೇ ವಾದಿ ಮಾರಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಮೇಲೆ ಹೇಳಿದ ಚೆಕ್ಕುಬಂಧಿಗಳ ಒಳಗಡೆ ಸರ್ವೇ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನು ಇದೆ ಎಂದರೆ ಸರಿ. ನನ್ನ ತಾತ ದಾವಾ ಆಸ್ತಿ ಸರ್ವೇ ನಂಬರ್ 79/3 ರ ಆಸ್ತಿಯನ್ನು ವಾದಿಯರ ತಂದೆಗೆ ಮಾರಾಟ ಮಾಡಿದ್ದರು ಸಹ ಖರೀದಿ ಪತ್ರದಲ್ಲಿ ಸರ್ವೇ ನಂಬರ್ 231/2 ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

4. ವಾದಿಯರೇ ದಾವಾ ಆಸ್ತಿ ಸರ್ವೇ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂಬರ್ 79/3 ರ 1 ಎಕರೆ 13 ಗುಂಟೆ ಜಮೀನನ್ನು ಖರೀದಿ ಮಾಡಿದಾಗಿನಿಂದ ಇಂದಿನವರೆಗೂ ವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಸಹ ನಾನು ಮೋಸದಿಂದ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರ ತಂದೆಯ ಜೀವಿತಾವಧಿಯಲ್ಲಿ ವಾದಿಯರ ತಂದೆಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದು, ಅವರ ಮರಣದ ನಂತರ ಇಂದಿನವರೆಗೂ ವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**